<u>ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.</u>

<u>**SC No.**185/2020</u>

**PW.** 9

**CW.** 13

**ಸಾಕ್ಷಿಯ ಹೆಸರು** **–ಡಿ ರಾಮಸ್ವಾಮಿ**

**ತಂದೆಯ ಹೆಸರು** **–ದಾಸಶೆಟ್ಟಿ**

**ವಯಸ್ಸು** –40 **ವರ್ಷಗಳು**

ದಿನಾಂಕ <u>02-07-2025</u> ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ** **–ವ್ಯವಸಾಯ**

**ವಾಸಸ್ಥಳ** **–ಚಾಮಲಾಪುರ ಗ್ರಾಮ , ಹೆಚ್ ಡಿ ಕೋಟೆ ತಾ**

<u>**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**</u>

ಚಾಸಾ–1 ನನ್ನ ತಾಯಿ. ಮೃತ ದಾಸಶೆಟ್ಟಿ ನನ್ನ ತಂದೆ. ಚಾಸಾ–8 ನನ್ನ ಹೆಂಡತಿ. ಚಾಸಾ–4 ಮತ್ತು ಚಾಸಾ–14 ನನ್ನ ಸಹೋದರರು. ಆರೋಪಿತರೆಲ್ಲರೂ ಗೊತ್ತು. 2016 ರಲ್ಲಿ 1 ನೇ ಆರೋಪಿ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದ . ನನ್ನ ಹೆಂಡತಿ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಾಳೆ. 1 ನೇ ಆರೋಪಿ ಈ ಹಿಂದೆ ಅಂಗನವಾಡಿ ಬಾಲ ವಿಕಾಸ ಸಮಿತಿಯ ಅಧ್ಯಕ್ಷನಾಗಿದ್ದನು. 1 ನೇ ಆರೋಪಿಯು ಅಂಗನವಾಡಿ ಕೇಂದ್ರದ ಬಳಿ ಬಂದು ನನ್ನ ಅನುಮತಿ ಇಲ್ಲದೇ ಯಾವುದೇ ಕೆಲಸ ಮಾಡಬಾರದೆಂದು ಹೆದರಿಸಿದನು. 1 ನೇ ಆರೋಪಿಯು ಆಹಾರ ವಿತರಣೆ ಮಾಡಲು ಕರೆದರು ಬರದೇ ಗಲಾಟೆ ಮಾಡುತ್ತಿದ್ದ. ಅಂಗನವಾಡಿ ಕೇಂದ್ರಕ್ಕೆ ಹಣ ಮಂಜೂರಾದರೆ ನನಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದ. ನಾನು ಆ ಬಗ್ಗೆ ದೂರು ನೀಡರಲಿಲ್ಲ , ನಮ್ಮ ನಮ್ಮಲ್ಲೇ ತೀರ್ಮಾನ ಮಾಡಿಕೊಳ್ಳೋಣ ಎಂದು ಸುಮ್ಮನಿದ್ದೆ.

ದಿಃ 23-04-2016 ರಂದು ಅಂಗನವಾಡಿ ಕೇಂದ್ರಕ್ಕೆ ಬಂದು ಗಲಾಟೆ ಮಾಡಿ , ನನ್ನ ಅನುಮತಿ ಇಲ್ಲದೇ ಆಹಾರ ಪದಾರ್ಥ ಕೊಡಬಾರದೆಂದು ಗಲಾಟೆ ಮಾಡಿದನು. ಆನಂತರ ನಾನು ಅಂಗನವಾಡಿ ಕೇಂದ್ರದ ಬಳಿ ಹೋದಾಗ , 1 ನೇ ಆರೋಪಿ ನನಗೂ ಕೂಡ ಬೈದನು. ನನ್ನ ಹೆಂಡತಿಯನ್ನು ಕೆಲಸದಿಂದ ತೆಗೆಸುತ್ತೇನೆ ಎಂದು ಹೇಳಿದನು. ಆಗ ಅಲ್ಲೆ ಇದ್ದ ಊರಿನ ಮುಖಂಡರು 1 ನೇ ಆರೋಪಿಗೆ ಸಮಾಧಾನ ಮಾಡಿ ಕಳುಹಿಸಿದರು.

ಅದೇ ದಿನ ಸಂಜೆ 6.30 ಗಂಟೆ ಸಮಯಕ್ಕೆ ನಾನು ನಮ್ಮ ಮನೆಯ ಹತ್ತಿರ ಇರುವಾಗ , ಎಲ್ಲ ಆರೋಪಿತರು ನಮ್ಮ ಮನೆಯ ಹತ್ತಿರ ಬಂದು, ನನ್ನ ಹೆಂಡತಿ ಜೊತೆ ಜಗಳ ಮಾಡಿ ,ಆರೋಪಿತರು ಕೈಯಿಂದ ಕಾಪಾಲಕ್ಕೆ , ಬೆನ್ನಿಗೆ ಹಾಗೂ ಇತರ ಭಾಗಕ್ಕೆ ಹೊಡೆದರು, ಹಾಗೂ ನನ್ನ ಹೆಂಡತಿಯ ಬಟ್ಟೆಯನ್ನು ಕಿತ್ತು ಹಾಕಿದರು. ಆಗ ನನ್ನ ತಂದೆ , ಸಹೋದರ ಹಾಗೂ ನಾನು ಗಲಾಟೆ ಬಿಡಿಸಲು ಬಂದಾಗ ಆರೋಪಿತರು ನಮಗೂ ಕೂಡ ತುಂಬ ಹೊಡೆದರು. ಇತರ ಆರೋಪಿತರು ದೊಣ್ಣೆ ಮತ್ತು ನಲ್ಲಿ ಪೈಪ್ ನಿಂದ ಹೊಡೆದು ಗಾಯ ಮಾಡಿದರು. ಗಾಯಗೊಂಡ ನಾನು , ನನ್ನ ಹೆಂಡತಿ , ಚಾಸಾ-4, ಚಾಸಾ-11, ಚಾಸಾ-13 ಇತರರು ಆಸ್ಪತ್ರೆಗೆ ಹೋದೆವು. ನನ್ನ ತಂದೆ ದಾಸಶೆಟ್ಟಿಗೆ ಸದರಿ ಗಲಾಟೆಯಲ್ಲಿ ಎದೆಗೆ ಪೆಟ್ಟಾಗಿ , ಮನೆಯಲ್ಲಿ ಇದ್ದರು.

ಅದೇ ದಿನ ಸಂಜೆ 7.00 ಗಂಟೆ ಸುಮಾರಿಗೆ ಚಾಸಾ-1 ಮತ್ತು ಮೃತ ದಾಸಶೆಟ್ಟಿ ಮನೆಯಲ್ಲಿ ಇದ್ದಾಗ , 1 ನೇ ಆರೋಪಿ ಮತ್ತು ಇತರರು ನಮ್ಮ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ನನ್ನ ತಂದೆಗೆ ಮಾನಸಿಕ ಕಿರುಕುಳ ನೀಡಿ ಆರೋಪಿತರು ಒತ್ತಾಯದಿಂದ ನನ್ನ ತಂದೆಗೆ ವಿಷ ಕುಡಿಸಿರುತ್ತಾರೆ. ಚಾಸಾ-1 ಮತ್ತು ಮಂಜುನಾಥ ನಂತರ ನನ್ನ ತಂದೆಯನ್ನು ಮೈಸೂರು ಕೆ ಆರ್ ಆಸ್ಪತ್ರೆಗೆ ದಾಖಲಿಸಿದ್ದು, 5 ದಿನಗಳ ನಂತರ ಚಿಕಿತ್ಸೆ ಫಲಕಾರಿಯಾಗದೇ ನನ್ನ ತಂದೆ

ಮೃತಪಟ್ಟಿರುತ್ತಾರೆ. ನನ್ನ ಹೆಂಡತಿಗೆ ಆರೋಪಿತರು ಬಟ್ಟೆ ಕಿತ್ತು ಹಾಕಿ ಗಲಾಟೆ ಮಾಡಿದ ಬಗ್ಗೆ ನನ್ನ ಹೆಂಡತಿ ಪ್ರತ್ಯೇಕ ದೂರು ನೀಡಿರುತ್ತಾಳೆ. ಘಟನೆ ಬಗ್ಗೆ ಪೊಲೀಸರು ನನ್ನ ಹೇಳಿಕೆ ಬರೆದುಕೊಂಡಿದ್ದಾರೆ.

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಕೆ ಸಿ ಬಿ ವಕೀಲರಿಂದಃ-**

ದಿಃ 23-04-2016 ರಂದು 1 ನೇ ಆರೋಪಿಯು ಅಂಗನವಾಡಿ ಕೇಂದ್ರದ ಬಳಿ ಬಂದು ಗಲಾಟೆ ಮಾಡಿದ ಬಗ್ಗೆ ನಾನು ಅಲ್ಲೆ ಇದ್ದೆ. ಆ ಬಗ್ಗೆ ನಾನು ದೂರು ನೀಡಿಲ್ಲ ಎಂದರೆ ಸರಿ .

ಬಾಲ ವಿಕಾಸ ಸಮಿತಿಯ ಅಧ್ಯಕ್ಷರು  ಅಂಗನವಾಡಿ ಕೇಂದ್ರದ ಆಗು ಹೋಗುಗಳ ಬಗ್ಗೆ ವಿಚಾರಿಸಲು ಅಧಿಕಾರ ಇದೆ ಎಂದರೆ ಸರಿ. ನನ್ನ ಹೆಂಡತಿ ಆಹಾರ ಪದಾರ್ಥಗಳನ್ನು ಸರಿಯಾಗಿ ವಿತರಿಸದಿದ್ದರೆ ಬಾಲ ವಿಕಾಸ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಸಂಬಂಧಪಟ್ಟ ಇಲಾಖೆಗೆ ದೂರು ನೀಡಬಹುದು ಎಂದರೆ ಸರಿ . ದಿಃ 23-04-2016 ರಂದು ಅಂಗನವಾಡಿ ಕೇಂದ್ರದ ಪಕ್ಕದ ಶಾಲಾ ಆವರಣದಲ್ಲಿ ಬೆಳಿಗ್ಗೆ 9.30 ರಿಂದ 11.00 ರವರೆಗೆ ವಾರ್ಡ ಸಭೆ ಇತ್ತು ಎಂದರೆ ಸರಿ . ಸದರಿ ವಾರ್ಡ ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು , ಸದಸ್ಯರು ಮತ್ತು ಪಿಡಿಓ ಹಾಗೂ ಇತರರು ಇರುತ್ತಾರೆ ಎಂದರೆ ಸರಿ. ದಿಃ 22-04-2016 ರಂದು ಆಹಾರ ಪದಾರ್ಥಗಳನ್ನು ವಿತರಣೆ ಮಾಡಿರಲಿಲ್ಲ.

ನಮ್ಮ ಅಂಗನವಾಡಿ ಕೇಂದ್ರ ಮತ್ತು ನಮ್ಮ ವಾಸದ ಮನೆ ಒಂದೇ ಗ್ರಾಮದಲ್ಲಿವೆ ಎಂದರೆ ಸರಿ . ಗಲಾಟೆ ಸಂಜೆ 6.30 ಗಂಟೆಗೆ ಶುರುವಾಗಿ ಎಷ್ಟು ಗಂಟೆಗೆ ಮುಗಿತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಊರಿನಿಂದ ಹೆಚ್ ಡಿ ಕೋಟೆಗೆ 26 ಕಿ ಮೀ ಅಂತರವಿದೆ. ಆ ದಿನ ಸಂಜೆ 8.30 ಗಂಟೆಗೆ ನಾನು, ನನ್ನ ಗಂಡ, ಚಾಸಾ-4, ಚಾಸಾ-11, ಚಾಸಾ-13 ಎಲ್ಲರೂ ಆಸ್ಪತ್ರೆಗೆ ಹೋಗಿ ಎರಡು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇವೆ. ನಂತರ ಆಸ್ಪತ್ರೆಯಿಂದ ಬಂದೆವು.  ನನ್ನ ಮೈದುನ

ಪಾಪಣ್ಣ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ. ಈ ಪ್ರಕರಣದ ಒಂದನೇ ಆರೋಪಿ ಅವರ ಮೇಲೆ ಹಲ್ಲೆ ಆದ ಬಗ್ಗೆ ನಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ . ಸದರಿ ಪ್ರಕರಣದಲ್ಲಿ ನಮ್ಮ ಕುಟುಂಬದ 12 ಸದಸ್ಯರ ಮೇಲೆ ಸಿಸಿ ನಂ 327/2016 ಪ್ರಕರಣ ದಾಖಲಾಗಿದೆ ಎಂದರೆ ಸರಿ .

ಆರೋಪಿತರು ನಮ್ಮ ಮೇಲೆ ದೂರು ನೀಡಿದ ಕಾರಣದಿಂದ ನಾವು ಅವರ ಮೇಲೆ ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ದಿಃ 23-04-2016 ರಂದು ಸಂಜೆ 7.00 ಗಂಟೆಗೆ ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ಮಾಡಿದ ಗಲಾಟೆಯನ್ನು ಕಾಂತರಾಜು, ಮಂಜುನಾಥ ಹಾಗೂ ಶಿವ ಎನ್ನುವವರು ನೋಡಿರುತ್ತಾರೆ. ನಾವು ಆಸ್ಪತ್ರೆಯಲ್ಲಿದ್ದಾಗ ನನ್ನ ತಂದೆ ಮನೆಯ ಹತ್ತಿರ ದಾಸಶೆಟ್ಟಿ ವಿಷ ಸೇವಿಸಿದ ವಿಚಾರವನ್ನು ನನ್ನ ತಾಯಿ ಮತ್ತು ಮಂಜುನಾಥ ನಮಗೆ 9.00 ಗಂಟೆಗೆ ಫೋನ್ ನಲ್ಲಿ ಹೇಳಿದರು. ಆರೋಪಿತರು ದಿಃ 23-04-2016 ರಂದು ಸಂಜೆ 7.30 ರ ಸಮಯದಲ್ಲಿ ನಮ್ಮ ಮನೆಯ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ . ಆರೋಪಿತರು ನನ್ನ ತಂದೆ ದಾಸಶೆಟ್ಟಿ ವಿಷ ಸೇವನೆ ಮಾಡಿ ಮಾನಸಿಕ ಹಿಂಸೆ ನೀಡಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ನೀಡಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ದಿನ ಸಂಜೆ 9.30 ಗಂಟೆಗೆ ನನ್ನ ತಂದೆಗೆ ಕೆ ಆರ್ ಆಸ್ಪತ್ರೆ ಮೈಸೂರಿಗೆ ಮಂಜುನಾಥ , ನನ್ನ ತಾಯಿ ಮತ್ತು ರಾಮಶೆಟ್ಟಿ ಹಾಗೂ ತಾಯಮ್ಮ ಕರೆದುಕೊಂಡು ಬಂದಿದ್ದರು. ಪೊಲೀಸರು ಆ ಬಗ್ಗೆ ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ .  ನಮ್ಮ ಊರು ಚಾಮಲಾಪುರದಿಂದ ಮೈಸೂರಿಗೆ 35 ಕಿಮೀ ದೂರದಲ್ಲಿದೆ. ನನ್ನ ಹೆಂಡತಿ ಅಂಗನವಾಡಿ ಕೇಂದ್ರದ ಮೂಲಕ ಮಕ್ಕಳು ಮತ್ತು ಗರ್ಭಿಣಿ ಮಹಿಳೆಯರಿಗೆ ವಿತರಿಸಲಾದ ಆಹಾರ ಧಾನ್ಯಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು 1 ನೇ ಆರೋಪಿ ಕೇಳಿದ್ದರಿಂದ ಅವರ ಮೇಲೆ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ನೀಡಿದ ದೂರಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.